ಮಾಡಿಯಾದ್ರೂ ತಗೊಳ್ಳೋದಪ್ಪಾ. ನೋಡಿದ್ಯಾ, ನೀನು ಎಲ್ಲಾ ಮಾರ್ಕಂಡು, ತೂರ್ಕಂಡು ಪರದೇಶಿ ಹಂಗೆ ಹುಟ್ಟಿದೂರು ಬಿಟ್ಟು ಹೋಗೋ ಹಂಗಾಯ್ತು. ನಾನು ಇರೋದನ್ನ ಮತ್ತಷ್ಟು ಬಡಕಾಯಿಸ್ತಿದೀನಿ ಅಂತ ಜಂಬ ಕೊಚ್ಚೋಕೆ ಲಾಯ್ಕಾಗುತ್ತಲ್ಲ? ಅವನೇನು ಈಗ ಕಡಿಮೆ ಕುಳ ಅಲ್ಲ. ಅರ್ಧ ಕೆಲಸ ಮಕ್ಕಳೇ ಮಾಡಿ ಮುಗಿಸ್ತಾರೆ. ಹೆಂಡ್ತಿ ಕಡೆಯೋರೂ ಕಮ್ಮಿ ಜನ ಅಲ್ಲ. ತಂಗಿಗೆ ಅಂದ್ರೆ ಅವರೂ ದುಡ್ಡು ಬಿಚ್ತಾರೆ'

'ಆಯ್ತು ಅಪ್ಪಾ, ನೀ ಹೇಳಿದ ಹಂಗೇ ಆಗ್ಲಿ. ಅವರಿಗೆ ಜಮೀನು ಮಾರ್ದಿದ್ರೆ ಸೈ, ಅಷ್ಟೇ ತಾನೇ? ನಮ್ಗೂ ಅವಸರ ಏನಿಲ್ವಲ್ಲ? ಒಳ್ಳೇ ರೇಟು ಬರೋವರೆಗೆ ಬಿದ್ದಿರುತ್ತೆ…'

ಮಗನ ಮಾತಿಗೆ ಹೂಂಗುಟ್ಟುವಾಗ ಶಿವರಾಮನ ದನಿ ಬಿದ್ದು ಹೋಗಿತ್ತು. ಸೀತಾಲಕ್ಷ್ಮಿಯ ಕಣ್ಣುಗಳಲ್ಲಿ ನೀರು ಮಡುಗಟ್ಟಿತ್ತು.

***

ಇದ್ದಿದ್ದನ್ನು ಕಳೆದುಕೊಳ್ಳುವುದು, ಅದರಲ್ಲೂ ಪಿತ್ರಾರ್ಜಿತವಾಗಿ ಬಂದಿದ್ದನ್ನು ಯಾರೋ ಕಂಡು ಗೊತ್ತಿಲ್ಲದವರಿಗೆ ಮಾರಿ ಹಾಕುವುದು ಅಂದರೆ ಜೀವ ಹೋಗುವಷ್ಟು ಸಂಕಟವಾಗುತ್ತದೆ ಎಂದು ಜಮೀನನ್ನು ಮಾರುವವರೆಗೆ ಸೀತಾಲಕ್ಷ್ಮಿ ಅಂದುಕೊಂಡಿರಲಿಲ್ಲ. ನಾಲ್ಕಾರು ತಿಂಗಳು ಸಮಯ ತೆಗೆದುಕೊಂಡಿತು ನಿಜ, ಆದರೆ ಒಳ್ಳೆಯ ದರಕ್ಕೆ ಜಮೀನು, ಮನೆಯ ವಿಲೇವಾರಿಯಾಯ್ತು. ಪೇಟೆ ಮನೆಗೆ ಅನುಕೂಲಕ್ಕೆ ಬರುವಷ್ಟನ್ನು ಮಾತ್ರ ಉಳಿಸಿಕೊಂಡು ಉಳಿದ ಪಾತ್ರೆ ಪರಡಿಗಳನ್ನು ಆರಕ್ಕೆ ಮೂರರಂತೆ ಮಾರುವಾಗ ಶಿವರಾಮ, ಸೀತಾಲಕ್ಷ್ಮಿ ಕಂಗೆಟ್ಟವರಂತೆ ಕಾಣುತ್ತಿದ್ದರು. ಭೂತಾಕಾರದ ಹಂಡೆ, ಕಡಾಯಿ, ಪಾತ್ರೆಗಳು ಪೇಟೆ ಊರಿನ ಅಂಗಡಿ ಸೇರಿಕೊಂಡವು. ಅವರು ಹೇಳಿದ್ದೇ ರೇಟು. ಕೊಟ್ಟಷ್ಟೇ ದುಡ್ಡು.

'ಅವೆಲ್ಲಾ ಎಂತಕ್ಕೆ ಬರ್ತಿತ್ತು ಅಪ್ಪಾ? ಈಗ ಮನೇಲಿ ಮದುವೆ, ಮುಂಜಿ ಮಾಡೋರು ಯಾರಿದಾರೆ? ಹಿಂದಿನ ಕಾಲದ ಹಾಗೆ ಎಂಟು, ಹತ್ತು ಮಕ್ಕಳು ಯಾರ ಮನೇಲಿರ್ತಾರೆ? ವರ್ಷ ಇಡೀ ಏನಾದ್ರೊಂದು ಹೆಚ್ಚುಕಟ್ಲೆ ಇದ್ದೇ ಇರ್ತಿತ್ತು. ಬೇಕಾಗುತ್ತೆ ಅಂತ ಕೂಡಿಟ್ಗಂಡಿರ್ತಿದ್ರು. ಬೇಕು ಅಂತ ಕೇಳಿದೋರಿಗೆ ಉಪಯೋಗಕ್ಕೆ ಕೊಡ್ತಿದ್ರು. ಅದೆಲ್ಲಾ ಹಳೇ ಕತೆ' ಅಪ್ಪನ ಮನಸ್ಸನ್ನು ಅರಿತುಕೊಂಡು ಸಮಾಧಾನ ಹೇಳಿದ ಪ್ರಸನ್ನ.

ಒಂದು ಮನೆ ಅಂದ ಮೇಲೆ, ಅದು ತೀರಾ ಮಧ್ಯಮವರ್ಗದವರದ್ದೇ ಆಗಿದ್ದರೂ, ಬೇಕಾದ್ದಕ್ಕಿಂತ ಬೇಡದ ಸಾಮಾನುಗಳೇ ಮನೆ ಭರ್ತಿ ತುಂಬಿಕೊಂಡಿರುವುದು ಹಲವರ ಅನುಭವ. ಬೇಡ ಎಂದು ಬಿಸಾಕುವಂತದ್ದಲ್ಲ, ಬೇಕು ಎಂದು ಕಾಪಿಟ್ಟುಕೊಳ್ಳುವಂಥದ್ದಲ್ಲ. ಅವು ಯಾವತ್ತೂ ಉಪಯೋಗಕ್ಕೆ ಬರದಿದ್ದರೂ ಬಿಸಾಕಲು ಕೈ ಬರದೆ ಇರುವುದು ಜನಸಾಮಾನ್ಯರ ವ್ಯಾಮೋಹ. ಯಾವತ್ತಾರೂ ಬೇಕಾಗುತ್ತೆ ಅನ್ನುತ್ತಾ ಎಲ್ಲವೂ ಸ್ಟಾಕು. ಇನ್ನು ತಲೆತಲಾಂತರದಿಂದ ವಾಸವಾಗಿದ್ದ ಮನೆಯಲ್ಲಿ ಅದೆಷ್ಟು ಸಾಮಗ್ರಿಗಳು ಒಟ್ಟಾಗಿರಬಹುದು? ಮನೆಯವರ ಕಲ್ಪನೆಗೂ ನಿಲುಕದಷ್ಟು. ಹಾರೆ, ಪಿಕಾಸಿ, ಕುಡುಗೋಲುಗಳಿಂದ ಹಿಡಿದು ಅಡಿಕೆ ಸುಲಿಯುವ ಮೆಟ್ಟುಗತ್ತಿ, ಹೆಡಗೆ, ಬುಟ್ಟಿಗಳವರೆಗೆ ಕೃಷಿಕೆಲಸಕ್ಕೆ ಅಗತ್ಯವಾದದ್ದನ್ನು ಜಮೀನು ಕೊಂಡವರೇ ಉಳಿಸಿಕೊಂಡರು, ಒಂದಿಷ್ಟು ಹೆಚ್ಚುವರಿ ಹಣ ಸಂದಾಯ ಮಾಡಿ. ತನ್ನ ಸೀರೆ, ಬಟ್ಟೆ, ಪುಡಿಗಾಸುಗಳನ್ನು ಜೋಪಾನವಾಗಿಟ್ಟುಕೊಂಡಿದ್ದ ಮರದ ಪೆಠಾರಿಯನ್ನು ಅನಿವಾರ್ಯವಾಗಿ ಬಿಟ್ಟು ಹೋಗಬೇಕಾಯ್ತು ಸೀತಾಲಕ್ಷ್ಮಿ.

'ಅದೆಲ್ಲಾ ಇಡೋಕೆ ಪೇಟೆಮನೇಲಿ ಜಾಗ ಎಲ್ಲಿರುತ್ತೆ ಅಮ್ಮಾ? ನಿಂಗೆ ಹೊಸ ಗಾಡ್ರೆಜ್ ಬೀರು ತೆಗೆಸಿಕೊಡ್ತೀನಿ, ಆಯ್ತಾ?' ಅಂದಿದ್ದ ಮಗ. ಜೀವನಾಸಕ್ತಿಯನ್ನೇ ಕಳೆದುಕೊಂಡವಳಂತಿದ್ದ ಸೀತಾಲಕ್ಷ್ಮಿ ಮಗನ ಮಾತಿಗೆ ಪ್ರತಿ ಹೇಳಿರಲಿಲ್ಲ. ಜಮೀನು ಮಾರಾಟಕ್ಕಿರುವ ವಿಷಯ ಊರಿನ ಆತ್ಮೀಯರಿಗೆ ತಿಳಿಸಿದ್ದ ಪ್ರಸನ್ನ. ಶಿವರಾಮನಿಗಿಂತ ಅವನ ಪರಿಚಿತ ವಲಯ ದೊಡ್ಡದು. ಪ್ರೈಮರಿಯಿಂದ ಪಿ.ಯು. ಮುಗಿಸುವವರೆಗೆ ಜೊತೆಗಾರರಾಗಿದ್ದವರಲ್ಲಿ ಅನೇಕರು ಅಪ್ಪ ಹಾಕಿದ ಆಲದಮರಕ್ಕೆ ಜೋತು ಬಿದ್ದಿದ್ದರು. ಜಮೀನು, ಮನೆ… ಅಂದಕೂಡಲೆ ಕೆಲವರಿಗಾದರೂ ಆಸಕ್ತಿ ಚಿಗುರಿತ್ತು. ಪ್ರಸನ್ನನ ಬಳಗದಲ್ಲಿ ಈ ವಿಷಯ ಚಲಾವಣೆಯಲ್ಲಿತ್ತು. ಆಸಕ್ತರು ವ್ಯವಹರಿಸುವುದಕ್ಕೆ ತಡವಾಗಿರಲಿಲ್ಲ. ಅಂದುಕೊಂಡ ಕೆಲಸ ಸುಸೂತ್ರವಾಗಿ ನೆರವೇರಿತ್ತು. ದಾಖಲೆಪತ್ರಗಳನ್ನು ಹಸ್ತಾಂತರಿಸಿ ರಿಜಿಸ್ಟ್ರಾರ್ ಆಫೀಸಿನಲ್ಲಿ ಸಹಿ ಮಾಡಲು ಅಪ್ಪ, ಮಗ ಹೋಗಿದ್ದರು. ಮನೆಯಲ್ಲಿ ಸೀತಾಲಕ್ಷ್ಮಿ ಒಬ್ಬಳೇ.

ಜಮೀನು, ಮನೆ ಇನ್ನೂ ತಮ್ಮ ಹೆಸರಲ್ಲೇ ಉಂಟು ಎನ್ನುವ ಕಿಂಚಿತ್ ಸಮಾಧಾನದ ಎಳೆ ಯಾವಾಗ ಕಡಿದು ತುಂಡಾಗುವ ಹಂತಕ್ಕೆ ಬಂತೋ ಆಗ ವಿಚಿತ್ರವಾದ ಶೂನ್ಯಭಾವನೆಯೊಂದು ಅವಳಲ್ಲಿ ತುಂಬಿಕೊಂಡಿತು. ಆಯ್ತು, ಎಲ್ಲಾ ಮುಗಿದುಹೋಯ್ತು. ಇನ್ನು ಈ ಮನೆ ತಮ್ಮದಲ್ಲ. ಈ ಊರು ತಮ್ಮದಲ್ಲ. ಈ ಜಮೀನು ತಮ್ಮದಲ್ಲ ಎನ್ನುವ ತಬ್ಬಲಿ ಭಾವ. ಊರು ಬಿಟ್ಟು ಹೊರಡುವಾಗ ಇನ್ನಿಲ್ಲವಾದ ತನ್ನ ಮುದ್ದುಮಗನನ್ನು ಎಂದೆಂದಿಗೂ ಒಬ್ಬಂಟಿಯಾಗಿಸಿ ಹೊರಟುಬಿಡುತ್ತಿದ್ದೇವೆ ಎನ್ನುವ ವಿಚಿತ್ರ ದಿಗಿಲು ಅವಳನ್ನು ಕಾಡಿತ್ತು. ಊರು ಬಿಡುವುದು ನಿಶ್ಚಯವಾಗುತ್ತಿದ್ದಂತೆ ದಿನಕ್ಕೆರಡು ಬಾರಿ ಎನ್ನುವಂತೆ ಅವಳು ಮಗನ ಅಂತ್ಯಕ್ರಿಯೆ ನೆರವೇರಿಸಿದ ತಮ್ಮ ತೋಟದ ಜಾಗಕ್ಕೆ ಹೋಗಿ ಗಂಟೆಗಟ್ಟಲೆ ಕೂತು ಕಣ್ಣೀರ್ಗರೆದು ಬರುತ್ತಿದ್ದಳು. ಅಲ್ಲಿ ಇನ್ನೂ ಉಳಿದುಕೊಂಡಿದ್ದ ಬೂದಿಯ ಅವಶೇಷವನ್ನು ಕೈಯಿಂದ ಸವರುತ್ತಿದ್ದಳು. ಮುಷ್ಟಿಯಲ್ಲಿ ತುಂಬಿಕೊಳ್ಳುತ್ತಿದ್ದಳು. ಸಮೃದ್ಧಿಯಾಗಿ ಹಾಲು, ತುಪ್ಪ ಉಣ್ಣಿಸಿ ಸಾಕಿ ಬೆಳೆಸಿದ್ದ ಮಗ. ಅರೆನಿಮಿಷ ಹೆಚ್ಚಿಗೆ ಗಮನಿಸಿದರೆ ತನ್ನ ದೃಷ್ಟಿಯೇ ತಾಕುತ್ತದೆಯೇನೋ ಎನಿಸುವಂತ ಕಟ್ಟುಮಸ್ತು ಯುವಕ. ಹಿಡಿಬೂದಿಯಾಗಿ ಮಣ್ಣಿಗೆ ಗೊಬ್ಬರವಾದ. ಗಾಳಿಗೆ ಸೇರಿಹೋದ. ಮರುಗಳಿಗೆ ಏನಾಗುತ್ತದೆಯೋ ಗೊತ್ತಿಲ್ಲದ ಈ ಅಶಾಶ್ವತ ಬದುಕಿನಲ್ಲಿ ಯಾಕೆ ಇಷ್ಟೆಲ್ಲಾ ನಾವೇ ಸೃಷ್ಟಿಸಿಕೊಳ್ಳುವ ಗೋಜಲು? ಗೊಂದಲ? ಅರಿಷಡ್ವರ್ಗಗಳ ಕೋಟಲೆ? ಇರುವಷ್ಟು ದಿನ ಎಲ್ಲರೂ ಒಬ್ಬರಿಗೊಬ್ಬರು ಹೊಂದಿಕೊಂಡು ಬದುಕುವಂತಿದ್ದಿದ್ದರೆ ಜೀವನ ಎಷ್ಟು ಚೆನ್ನಾಗಿರುತ್ತಿತ್ತು? ಮೊಣಕಾಲ ಮೇಲೆ ತಲೆಯಿಟ್ಟು ಮಗನ ಚಿತಾಭಸ್ಮವನ್ನು ನೋಡುತ್ತಾ ಸೀತಾಲಕ್ಷ್ಮಿ ತಲೆಬುಡವಿಲ್ಲದ ಭಾವನೆಗಳಲ್ಲಿ ಕಳೆದುಹೋಗಿದ್ದಳು. ಕಂದ ಇಲ್ಲೆಲ್ಲಾದರೂ ಗಾಳಿಯಾಗಿ ಸುತ್ತುತ್ತಿರಬಹುದೇ? ಎಲ್ಲವನ್ನೂ ಗಮನಿಸುತ್ತಿರಬಹುದೇ? ತನ್ನನ್ನು ಶಾಶ್ವತವಾಗಿ ಬಿಟ್ಟು ಹೋಗುತ್ತಾರೆಂಬ ಅನಾಥಭಾವನೆಯಿಂದ ಕಿವಿಗೆ ಬೀಳದ ವ್ಯಥೆಯ ಮಾತನ್ನು ಉಸುರುತ್ತಿರಬಹುದೇ? ಕ್ಷಮಿಸು ಮಗನೇ, ಕ್ಷಮಿಸು. ಬೇರೆ ವಿಧಿ ಇಲ್ಲದೆ ತೆಗೆದುಕೊಳ್ಳಬೇಕಾಯ್ತು ಈ ತೀರ್ಮಾನ. ನಿನ್ನಪ್ಪ ಒಬ್ಬರು ಸರಿಯಾಗಿದ್ದಿದ್ದರೆ ಇನ್ನಷ್ಟು ವರ್ಷ, ಅಲ್ಲಲ್ಲ, ಬದುಕಿನ ಕೊನೆ ಕ್ಷಣದವರೆಗೂ ಇಲ್ಲೇ ಕಾಲ ಹಾಕಬಹುದಿತ್ತು. ಕೊನೆಯಲ್ಲಿ ನಿನ್ನೊಡನೆ ಸೇರಿಕೊಳ್ಳಬಹುದಿತ್ತು. ನನ್ನ ಕೈಲಿ ಏನೂ ಇಲ್ಲ. ಅಸಹಾಯಕಳಾಗಿದ್ದೇನೆ ನಾನು. ನಿನ್ನಣ್ಣನ ಭವಿಷ್ಯಕ್ಕೋಸ್ಕರ ತೆಗೆದುಕೊಂಡ ತೀರ್ಮಾನ ನಿನಗೆ ಇಷ್ಟವಾಗದಿದ್ದರೂ ಪರಿಸ್ಥಿತಿಯನ್ನು ನೀನು ಅರ್ಥ ಮಾಡಿಕೊಳ್ಳುತ್ತಿ ಎಂದು ಗೊತ್ತು ನನಗೆ. ನೀನು ನನ್ನ ಮಗ.

ಸೀತಾಲಕ್ಷ್ಮಿಗೆ ಏನೇನೆನಿಸುತ್ತಿತ್ತೋ ಅವಳಿಗೇ ಗೊತ್ತಾಗುತ್ತಿರಲಿಲ್ಲ. ಇದೀಗ ಜಮೀನು, ಮನೆ ಪರರ ಸ್ವತ್ತಾಗುತ್ತಿದೆ. ಜಮೀನ್ದಾರರು ಎಂದಿರುತ್ತಿದ್ದ ವಿಳಾಸ ಶಾಶ್ವತವಾಗಿ ಕಣ್ಮರೆಯಾಗುತ್ತದೆ. ಪ್ರಸನ್ನ ಒಳ್ಳೆಯ ಮನೆಯನ್ನೇ ಬಾಡಿಗೆಗೆ ಹಿಡಿದಿದ್ದಾನಂತೆ. ಆದರೆ ಅದು ನಮ್ಮ ಹಳ್ಳಿಮನೆಯ ಕಾಲುಭಾಗದಷ್ಟಾದರೂ ಇರಲು ಸಾಧ್ಯವೇ? ಎಲ್ಲಿರುತ್ತದೆ ವಿಶಾಲವಾದ ಅಂಗಳ? ಸಮೃದ್ಧವಾಗಿ ತರಕಾರಿ ಉಣಿಸುತ್ತಿದ್ದ ಹಿತ್ತಲು? ಕೊಟ್ಟಿಗೆ ತುಂಬಿರುತ್ತಿದ್ದ ಕರಾವು? ಒಂದು ಸುಂದರ ಕನಸಿನಂತೆ ಎಲ್ಲಾ ಕರಗಿ ಹೋಗುತ್ತಿದೆ. ಇನ್ನೆಂದೂ ಬೀಳುವುದಿಲ್ಲ ಅಂಥ ಕನಸು. ಕೈಗೆಟುಕುವುದಿಲ್ಲ ಭೂತಕಾಲ. ಅತ್ತ ಅಪ್ಪ, ಮಗ ಹಸ್ತಾಂತರದ ಸಹಿ ಹಾಕುತ್ತಿದ್ದ ವೇಳೆಯಲ್ಲಿ ಇತ್ತ ಸೀತಾಲಕ್ಷ್ಮಿ ಮಗನೊಡನೆ ಆತ್ಮ ನಿವೇದನೆ ಮಾಡಿಕೊಳ್ಳುತ್ತಿದ್ದಳು.

***

ನಿಧನಿಧಾನವಾಗಿ ಪಟ್ಟಣದ ಜೀವನ ದಂಪತಿಗೆ ಒಗ್ಗುತ್ತಾ ಬಂತು. ಒಗ್ಗಿಕೊಳ್ಳಬೇಕಾಯ್ತು. ತೋಟ, ಗದ್ದೆ, ಮನೆ ಎಂದು ವಿಲೇವಾರಿಯಾಗಿ ಕೈಗೆ ಬಂದ ನಲವತ್ತು ಲಕ್ಷದಷ್ಟು ಹಣವನ್ನು ಬ್ಯಾಂಕಿನಲ್ಲಿ ಠೇವಣಿಯಾಗಿರಿಸಿದ ಪ್ರಸನ್ನ, ಅಪ್ಪನ ಹೆಸರಿನಲ್ಲಿ. ಅಪ್ಪ ಜೋಪಾನವಾಗಿ ಕಟ್ಟಿ ತಂದಿದ್ದ ಒಡವೆಗಳ ಗಂಟನ್ನು ಮನೆಯಲ್ಲಿಟ್ಟುಕೊಳ್ಳಲು ಅವನು ಒಪ್ಪಿರಲಿಲ್ಲ. 'ಕೆ.ಜಿ.ಗಟ್ಟಲೆ ಚಿನ್ನ ಅಂದರೆ ಹುಡುಗಾಟಾನಾ? ಲಾಕರ್‌ನಲ್ಲಿಡೋಣ' ಎನ್ನುವ ಅವನ ಮಾತು ಶಿವರಾಮನಿಗೆ ಸಂಪೂರ್ಣವಾಗಿ ಒಪ್ಪಿತವಿರಲಿಲ್ಲ. ಅರೆಬರೆ ಮನಸ್ಸು. ಕಣ್ಣ